ಅಧ್ಯಕ್ಷರು :– ಯಾವ ವಿಷಯದ ಬಗ್ಗೆ ಮಾತನಾಡಬೇಕೆಂದು ತಾವು ಮೊದಲು ಬರೆದು ಕಳುಹಿಸಿಕೊಟ್ಟಿದ್ದೀರಾ? ಸುಮ್ಮನೆ ಬಂದು ಏನೋ ಕತೆ ಹೇಳುವ ಹಾಗೆ ಹೇಳುತ್ತಾ ಹೋದರೆ ಹೇಗೆ?

ಶ್ರೀ ಐವಾನ್ ನಿಗ್ಲಿ :– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಬರೆದುಕೊಟ್ಟಿದ್ದೇನೆ. Airport Road ನಿಂದ ಹೊಸಕೋಟೆ ಕಡೆಗೆ ಹೋಗುವ ಚಿರಂಜನ್ ದಾಸ್ ರಸ್ತೆಗೆ NGEF ಹತ್ತಿರ ಒಂದು ಅಂಡರ್‌ಪಾಸ್ ವ್ಯವಸ್ಥೆ ಮಾಡಬೇಕು. ಮತ್ತೆ DRDO ನಿಂದ Old Madras road ಗೆ one way traffic ಮಾಡಬೇಕು. ಮತ್ತೆ ಇಂದಿರಾನಗರದಿಂದ Old Madras road ಗೆ ಬರುವ ದಾರಿಗೆ ಒಂದು ಅಂಡರ್‌ಪಾಸ್ ಮಾಡಬೇಕೆಂದು ಕೇಳುತ್ತಿದ್ದೇನೆ. ಮತ್ತೆ ಆ ರಸ್ತೆಯನ್ನು ವೈಡನಿಂಗ್ ಮಾಡಿ ಅಂಡರ್ ಪಾಸ್ ಗೆ ಬ್ರಿಡ್ಜ್ ಮಾಡಬೇಕಾಗುತ್ತದೆ..

ಶ್ರೀ ಎಂ.ಪಿ. ಪ್ರಕಾಶ್ : (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಾರಿಗೆ ಸಚಿವರು ತಮ್ಮ ಅಪ್ಪಣೆಯನ್ನು ಪಡೆದು ಕೆಆರ್‌ಎಸ್ ನಲ್ಲಿ ಭಾಗೀನ ಕೊಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರಿಂದ ನಾಳೆ ದಿವಸ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ ಐವಾನ್ ನಿಗ್ಲಿಯವರು ಪ್ರಸ್ತಾಪ ಮಾಡಿರುವ ವಿಷಯ ಏನೆಂದರೆ, Old Madras Road ತುಂಬಾ ಇಕ್ಕಟ್ಟಾಗಿರುವುದರಿಂದ ಟ್ರಾಫಿಕ್ ಜಾಮ್ ಜಾಸ್ತಿಯಾಗುತ್ತಿದೆ. ಸದರಿ ರಸ್ತೆಯನ್ನು ವೈಡನಿಂಗ್ ಮಾಡಬೇಕೆಂಬುದು ಅವರ ಪ್ರಶ್ನೆಯಾಗಿದೆ.

ಅಧ್ಯಕ್ಷರು :– ಮಾನ್ಯ ವೈಜನಾಥ್ ಪಾಟೀಲ್ ರವರೆ ತಾವು ಮಾತನಾಡಿ.

(3) ವಿಷಯ :– "ಆನುದೇವ ಹೊರಗಣವನು" ಪುಸ್ತಕವನ್ನು ಮುಟ್ಟುಗೋಲು ಹಾಕುವ ಬಗ್ಗೆ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) :– ಮಾನ್ಯ ಅಧ್ಯಕ್ಷರೆ, ಬಸವಣ್ಣನವರ ಬಗ್ಗೆ ಪ್ರಕಟವಾಗಿರುವ ವಿವಾದಾತ್ಮಕ ಪುಸ್ತಕವನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಬಹಳಷ್ಟು ಮಂದಿಯಿಂದ ಬೇಡಿಕೆ ಬಂದಿದೆ. ಇದರ ಬಗ್ಗೆ ಎರಡು ದಿವಸಗಳಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಆದರೆ, ಇದುವರೆವಿಗೂ ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ. ಇವತ್ತಿನ ದಿವಸ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಗುಲ್ಬರ್ಗದಲ್ಲಿ ಆಚರಣೆ ಮಾಡುತ್ತಿದ್ದಾರೆ, ಆದ್ದರಿಂದ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಬಿ. ಆರ್. ಪಾಟೀಲ್ (ಆಳಂದ):– ಮಾನ್ಯ ಅಧ್ಯಕ್ಷರೆ, ಇವತ್ತು ಗುಲ್ಬರ್ಗ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಇದರಿಂದ ಅಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ. ಇದರ ಬಗ್ಗೆ ಸರ್ಕಾರ ದಯಮಾಡಿ ಏನಾದರೊಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಇವತ್ತು ಗುಲ್ಬರ್ಗದಲ್ಲಿ ಆಗಿರುವಂತೆ ನಾಳೆ ದಿವಸ ಬೀದರ್, ರಾಯಚೂರು ಹಾಗೂ ಇಡೀ ರಾಜ್ಯದಲ್ಲಿ ಈ ರೀತಿಯಾದ ಅಶಾಂತಿ ವಾತಾವರಣ ನಿರ್ಮಾಣವಾಗಬಾರದು ಮತ್ತು ಇದರಿಂದ ಜನರಿಗೆ ತೊಂದರೆಯಾಗಬಾರದು, ಆ ದೃಷ್ಟಿಯಿಂದ ಇದಕ್ಕೆ ಸರ್ಕಾರ ಇತಿಶ್ರೀ ಹಾಡಬೇಕು. ಇದರ ಬಗ್ಗೆ ಇನ್ನು ಎರಡು ದಿವಸಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಆದರೆ, ಎರಡು ದಿವಸ ಮುಗಿದು ಇವತ್ತಿಗೆ ನಾಲ್ಕು ದಿವಸ ಆಗಿದೆ. ಆದ್ದರಿಂದ, ಸರ್ಕಾರಕ್ಕೆ ನಾನು ಹೇಳುವುದೇನೆಂದರೆ, ಈ ರೀತಿಯಾದ ಬಂದ್ ಕರೆಗಳು ನಾಳೆ ದಿವಸ ಮುಂದುವರಿಯುತ್ತಾ ಹೋದರೆ ರಾಜ್ಯದಲ್ಲಿ ಅಶಾಂತಿ ವಾತಾವರಣ ನಿರ್ಮಾಣಗೊಂಡು ಬೇರೆ ದಿಕ್ಕು ಹಿಡಿಯಬಾರದು. ಆದ್ದರಿಂದ, ಇದರ ಬಗ್ಗೆ ಸರ್ಕಾರ ಆದಷ್ಟು ಬೇಗ ಒಂದು ನಿರ್ಣಯ ಕೈಗೊಳ್ಳಬೇಕು. ಮತ್ತೆ ಇವತ್ತು ಗುಲ್ಬರ್ಗ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಇದರ ಬಗ್ಗೆ ತಕ್ಷಣ ಸ್ಪಂದಿಸಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ:– (ತೋಟಗಾರಿಕೆ ಸಚಿವರು) ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಹುಕ್ಕೇರಿಯಲ್ಲಿಯೂ ಕೂಡ ಬಂದ್‌ಗೆ ಕರೆ ಕೊಟ್ಟಿದ್ದಾರೆ. ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ರಾಜೇಂದ್ರವರ್ಮ (ಹುಲಸೂರು):– ಮಾನ್ಯ ಅಧ್ಯಕ್ಷರೆ, ಈ ಪುಸ್ತಕದ ಸಂಬಂಧವಾಗಿ ಇಡೀ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳು ಬಂದ್ ಆಗುತ್ತಿವೆ. ಆ ಒಂದು ಪುಸ್ತಕದಿಂದ ಇಡೀ ಸಮಾಜಕ್ಕೆ ಬಹಳ ಕೆಟ್ಟ ಪರಿಣಾಮ ಬೀರತಕ್ಕಂಥದಾಗಿದೆ. ಆದ್ದರಿಂದ, ಆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುವಂಥ ಕೆಲಸವನ್ನು ಸರ್ಕಾರ ತಕ್ಷಣ ಮಾಡಬೇಕು. ಕೇವಲ ಬಸವಣ್ಣನವರಲ್ಲದೆ ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಮತ್ತು ಕುವೆಂಪುರವರ ಬಗ್ಗೆ ಕೂಡ ಆ ಪುಸ್ತಕದಲ್ಲಿ ಹೇಳಲಾಗಿದೆ. ಆದ್ದರಿಂದ, ಸರ್ಕಾರ ತಕ್ಷಣ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತದೆ. ಆದ್ದರಿಂದ, ತಕ್ಷಣ ಆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನನ್ನ ಕಳಕಳಿಯಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ ಈಗಾಗಲೇ ಎಲ್ಲಾ ಮಾನ್ಯ ಶಾಸಕರು ಹೇಳಿದಂತೆ

ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ರಚನೆ ಮಾಡಿದ್ದರು. ಸಮಿತಿಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಸೀಲ್ಡ್ ಕವರ್ ನಲ್ಲಿಟ್ಟು ಮಾನ್ಯ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಅವಲೋಕಿಸುತ್ತಿದೆ. ಪ್ರಾಯಶಃ ಸೋಮವಾರ ಅಥವಾ ಮಂಗಳವಾರದೊಳಗೆ ಈ ಬಗ್ಗೆ ಸರ್ಕಾರ ನಿರ್ಣಯ ಕೈಗೊಳ್ಳುತ್ತದೆ.

(4) ವಿಷಯ :– ನಕ್ಸಲ್ ಕಾರ್ಯಾಚರಣೆಯಲ್ಲಿ ಮೃತಪಟ್ಟ ವೆಂಕಟೇಶ್ ರವರಿಗೆ ಪರಿಹಾರ ನೀಡುವ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಕ್ಷೇತ್ರದಲ್ಲಿ ನಕ್ಸಲೀಯರ ಉಪಟಳ ವಿಚಿತ್ರವಾದಂಥ ರೀತಿಯಲ್ಲಿ ಆಗುತ್ತಿದೆ. ಎರಡು–ಮೂರು ಸಾರಿ ಈ ವಿಷಯವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. 17 ನೇ ತಾರೀಖಿನ ದಿವಸ ಆಗುಂಬೆ ಪತ್ತಿರ ನಡೆದಿರತಕ್ಕಂಥ ಒಂದು ಚಕಮಕಿಯಲ್ಲಿ ನನ್ನ ಕ್ಷೇತ್ರದ ಪೊಲೀಸ್ ಅಧಿಕಾರಿಯಾರಿರುವಂಥ ASI ವೆಂಕಟೇಶ್‌ರವರು ಆಹುತಿಯಾಗಿದ್ದಾರೆ. ಅವರು ಸ್ಥಳೀಯರಾಗಿದ್ದರು ಮತ್ತು ಪೊಲೀಸ್‌ನವರಿಗೆ ಸಹಾಯ ಮಾಡತಕ್ಕಂಥ ವ್ಯಕ್ತಿಯಾಗಿದ್ದರು. ಏಕೆಂದರೆ, ಆ ಗುಡ್ಡಗಾಡಿನಲ್ಲಿ ಎಲ್ಲಾ ರಸ್ತೆಗಳು ಗೊತ್ತಿರುವಂಥ ವ್ಯಕ್ತಿಯಾಗಿದ್ದರು. ಅವರು ಮಾಲೂರಿನಲ್ಲಿ ಕೆಲಸ ಮಾಡುತ್ತಿದ್ದರೂ ಸಹ, ನಕ್ಸಲೈಟ್‌ಗೋಸ್ಕರ ಆಗುಂಬೆಯಲ್ಲಿ ಅವರ ಕೆಲಸವನ್ನು ಬಳಸಿಕೊಳ್ಳಲಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಅವರು ಮೃತಪಟ್ಟಿದ್ದಾರೆ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅಲ್ಲಿಗೆ ಅಧಿಕಾರಿಗಳನ್ನು ಹಾಕಿದರೂ ಕೂಡ ಅಲ್ಲಿಗೆ ಹೋಗಲಾರದಂಥ ಸ್ಥಿತಿಯಲ್ಲಿ, ತಮ್ಮ ಎದೆಕೊಟ್ಟು ಹೋಗುವಂಥ ಪೊಲೀಸ್ ಅಧಿಕಾರಿಗಳಿಗೆ ಮತ್ತೆ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಧೈರ್ಯ ತುಂಬತಕ್ಕಂಥ ಕೆಲಸ ಸರ್ಕಾರದ ಕಡೆಯಿಂದ ಆಗಬೇಕಾಗಿದೆ. ಮೃತಪಟ್ಟಿರುವ ವೆಂಕಟೇಶ್ ಕುಟುಂಬ ವರ್ಗದವರಿಗೆ ಆರ್ಥಿಕವಾಗಿ ಬಹಳ ದೊಡ್ಡ ಸಹಾಯವನ್ನು ಸರ್ಕಾರ ಮಾಡಬೇಕು. ಮತ್ತು ಅವರ ಮಗನಿಗೆ ಇಲಾಖೆಯಲ್ಲಿ ಒಂದು ನೌಕರಿಯನ್ನು ಕೊಡಬೇಕು. ಪೊಲೀಸ್ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು ಆತನ ಮನೆಗೆ ಭೇಟಿ ಮಾಡಿದ್ದರು. ಮತ್ತೆ ನಾನೂ ಕೂಡ ಹೋಗಿದ್ದೆ. 18 ನೇ ತಾರೀಖಿನ ದಿವಸ ಅವರ ಶವಸಂಸ್ಕಾರದ ದಿವಸ ಇಡೀ ತಾಲ್ಲೂಕು ಬಂದ್ ಆಚರಿಸಿ, ಅವರಿಗೆ ಸಹಮತಿಯನ್ನು ವ್ಯಕ್ತಪಡಿಸಿತು. ಮತ್ತೆ ನಕ್ಸಲರ ವಿರುದ್ಧ ನಾವೆಲ್ಲರೂ ಇದ್ದೇವೆಂಬ ಸಂದೇಶವನ್ನು ನನ್ನ ತಾಲ್ಲೂಕಿನಲ್ಲಿ ಕಳುಹಿಸಿಕೊಡಲಾಗಿದೆ. ಆ ಒಂದು ಹೋರಾಟದಲ್ಲಿ ಮಡಿದಂಥ ಪೊಲೀಸ್ ಅಧಿಕಾರಿಯ ಕುಟುಂಬಕ್ಕೆ ಯೋಗ್ಯವಾಗಿರತಕದಕಂಥ ಪರಿಹಾರವನ್ನು ಸರ್ಕಾರ ಕೊಡಿಸಿಕೊಡಬೇಕೆಂದು ನಾನು ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ.